## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಾದೇಶಿಕ ಸಂಪರ್ಕ ಯೋಜನೆ-ಉಡಾನ್ (RCS-UDAN)ರಡಿ ಆಯ್ಕೆಯಾದ ಏರ್‌ಲೈನ್‌ಆಪರೇಟರ್ಸ್ ರಾಜ್ಯದ RCS network/ಮಾರ್ಗಗಳಲ್ಲಿ ಒದಗಿಸಿರುವ ವಿಮಾನಯಾನ ಸೇವೆಗೆ ಸಂಬಂದಪಟ್ಟಂತೆ ರಾಜ್ಯ ಸರ್ಕಾರದ ಪಾಲಿನ ವಿ.ಜಿ.ಎಫ್ (Viability Gap Funding), ಮೊತ್ತ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 18/4/2017.

2) ನಾಗರೀಕ ವಿಮಾನಯಾನ ಮಂತ್ರಾಲಯ (MoCA) ಭಾರತ ಸರ್ಕಾರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರ ನಡುವೆ ಮಾಡಿಕೊಂಡಿರುವ ಒಡಂಬಡಿಕೆ (MoU) ದಿನಾಂಕ 20/04/2017.

3) ಸರ್ಕಾರದ ಅಧಿಸೂಚನೆ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 28/04/2017 ಮತ್ತು ತಿದ್ದುಪಡಿ ಸಂಖ್ಯೆ: ಐಡಿಡಿ 31 ಡಿಐಎ 2018, ದಿನಾಂಕ 06/7/2018 ಹಾಗೂ ಸಂಖ್ಯೆ: ಐಡಿಸಿ 142 ಡಿಐಎ 2020, ದಿನಾಂಕ 14/02/2022.

4) ಸರ್ಕಾರದ ಆದೇಶ ಸಂಖ್ಯೆ: ಮೂಅಇ 22 ನಮುಯೋ 2020, ದಿನಾಂಕ 15/04/2021.

5) ಜನರಲ್ ಮ್ಯಾನೇಜರ್(ಎಫ್&ಎ)-ಆರ್‌ಸಿಎಸ್, ಪ್ರಾದೇಶಿಕ ವಿಮಾನಯಾನ ಸಂಪರ್ಕ ನಿಧಿ ಇವರ ಪತ್ರ ಸಂಖ್ಯೆ: MoCA/AAI/RCS/RACFT/VGF SHARE CLAIM/KA/25/2017/457, ದಿನಾಂಕ 02/03/2022 (53ನೇ ಕ್ಲೇಮು).

6) ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 142 ಡಿಐಎ 2020, ದಿನಾಂಕ 14/02/2022.

7) ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 142 ಡಿಐಎ 2020, ದಿನಾಂಕ 15/3/2022.

***

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 18/4/2017ರ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ನಾಗರೀಕ ವಿಮಾನಯಾನ ನೀತಿ 2016ರ ಅಡಿಯಲ್ಲಿನ Regional Connectivity Scheme (RCS)ರಲ್ಲಿ ಪಾಲ್ಗೊಳ್ಳುವ ಸಲುವಾಗಿ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಹಾಗೂ ಕರ್ನಾಟಕ ಸರ್ಕಾರದ ನಡುವೆ ಒಡಂಬಡಿಕೆಗೆ (Memorandum of Understating) ಅನುಮೋದನೆ ನೀಡಲಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ನಾಗರೀಕ ವಿಮಾನಯಾನ ಮಂತ್ರಾಲಯ (MoCA) ಭಾರತ ಸರ್ಕಾರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರ ನಡುವೆ ದಿನಾಂಕ 20/04/2017 ರಂದು ಒಡಂಬಡಿಕೆಗೆ ((MoU) ಸಹಿ ಮಾಡಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಸರ್ಕಾರದ ಅಧಿಸೂಚನೆ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 28/04/2017 ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಐಡಿಡಿ 31 ಡಿಐಎ 2018, ದಿನಾಂಕ 6/7/2018 ಹಾಗೂ ಸೇರ್ಪಡೆ ಆದೇಶ ಸಂಖ್ಯೆ: ಐಡಿಡಿ 142 ಡಿಐಎ 2020, ದಿನಾಂಕ 14/2/2022 (ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 18/4/2017ರಲ್ಲಿ ನೀಡಲಾಗಿರುವ ಅನುಮೋದನೆಯಂತೆ) ಮೈಸೂರು (ಮಂಡಕಳ್ಳಿ), ಬೀದರ್, ಬೆಂಗಳೂರು, ವಿದ್ಯಾನಗರ (ಬಳ್ಳಾರಿ), ಹುಬ್ಬಳ್ಳಿ, ಬೆಳಗಾವಿ ಮತ್ತು ಕಲಬುರಗಿ ವಿಮಾನ ನಿಲ್ದಾಣಗಳನ್ನು Regional Connectivity Scheme (RCS) ಸೇರಿಸಲಾಗಿದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಸರ್ಕಾರದ ಆದೇಶ ಸಂಖ್ಯೆ: ಮೂಅಇ 22 ನಮುಯೋ 2020, ದಿನಾಂಕ 15/4/2021 ರಲ್ಲಿ ಪ್ರಸಕ್ತ 2021-22ನೇ ಸಾಲಿನಲ್ಲಿ ರಾಜ್ಯದ ಅಯವ್ಯಯದಲ್ಲಿ ಲೆಕ್ಕ ಶಿರ್ಷಿಕೆ "3451-00-090-1-18-059 Regional Air Conectivity other expenses (ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು)" ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯವು Regional Connectivity Scheme (RCS)-UDAN ಅಡಿ ರಾಜ್ಯದ ಐದು ವಿಮಾನ ನಿಲ್ದಾಣಗಳ ಮೂಲಕ ವಿಮಾನಯಾನ ನಡೆಸುತ್ತಿರುವ ವಿಮಾನಯಾನ ಸಂಸ್ಥೆಗಳಿಗೆ ನೀಡಲಾಗಿರುತ್ತಿರುವ Viability Gap Funding ಸಹಾಯಧನದ ಪೈಕಿ ಶೇಕಡ 20ರಷ್ಟು ಮೊತ್ತವನ್ನು ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗುತ್ತಿದೆ.

5. ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಜನರಲ್ ಮ್ಯಾನೇಜರ್(ಎಫ್&ಎ)-ಆರ್‌ಸಿಎಸ್, ಪ್ರಾದೇಶಿಕ ವಿಮಾನಯಾನ ಸಂಪರ್ಕ ನಿಧಿ ಇವರ ಪತ್ರ ಸಂಖ್ಯೆ: MoCA/AAI/RCS/RACFT/VGF SHARE CLAIM/KA/25/2017/457, ದಿನಾಂಕ 02/03/2022 (53ನೇ ಕ್ಲೇಮು)ರಲ್ಲಿ ನವೆಂಬರ್ ಮತ್ತು ಡಿಸೆಂಬರ್ 2021ರಲ್ಲಿ ಮೆ:ಸ್ಪೈಸ್‌ಜೆಟ್ ಲಿಮಿಟೆಡ್, ಅಲಿಯೆನ್ಸ್ ಏರ್ ಏವಿಯೇಷನ್ ಲಿಮಿಟೆಡ್, ಮೆ:ಘೋಡಾವತ್ ಎಂಟರ್‌ಪ್ರೈಸಸ್ ಪ್ರೈ.ಲಿಮಿಟೆಡ್ ಹಾಗೂ ಇಂಟರ್‌ಗ್ಲೋಬ್ ಏವಿಯೇಷನ್ ಸಂಸ್ಥೆಗಳು RCS network/ಮಾರ್ಗಗಳಲ್ಲಿ ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂದಪಟ್ಟಂತೆ it is requested to reimburse an amouut of **Rs.3,57,72,267/-** towards its share of VGF disbursed (3,47,48,181+10,24,086) i.e 20% of Rs. 17,37,40,906/- and 10% of Rs.1,02,40,860/- to the Selected Airline Operators. Copy of invoices for VGF claims raised by SAO's are also enclosed. ಇದೇ ಪತ್ರದಲ್ಲಿ ರೂ.6,14,87,193/- ಬಾಕಿ ಇರುತ್ತದೆಂದು, ಒಟ್ಟು ರೂ.9,72,59,460/- (6,14,87,193+3,57,72,267) ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರುತ್ತಾರೆ.

6. ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ದಿನಾಂಕ 14/02/2022ರ ಸರ್ಕಾರದ ಆದೇಶದಲ್ಲಿ ವಿಜಿಎಫ್ ಕ್ಲೇಮು ಸಂಖ್ಯೆ: 50 ಮತ್ತು ಕ್ಲೇಮು ಸಂಖ್ಯೆ:51ರಲ್ಲಿನ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.5,99,41,125/-ಗಳನ್ನು ಮರುಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ.

7. ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ದಿನಾಂಕ 15/03/2022ರ ಸರ್ಕಾರದ ಆದೇಶದಲ್ಲಿ ವಿಜಿಎಫ್ ಕ್ಲೇಮು ಸಂಖ್ಯೆ:52ರಲ್ಲಿನ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.15,46,069/-ಗಳನ್ನು ಮರುಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ

ಪ್ರಸ್ತಾಪಿತ **ರೂ. 3,57,72,267/-** ಮೊತ್ತದ ಕ್ಲೇಮ್ ವೆಚ್ಚವನ್ನು ಪ್ರಸಕ್ತ ಆರ್ಥಿಕ ವರ್ಷದ ಲೆಕ್ಕ ಶಿರ್ಷಿಕೆ "3451-00-090-1-18-059 Regional Air Conectivity other expenses (ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು)" ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸಬೇಕಾಗುತ್ತದೆ. ಈ ಲೆಕ್ಕಶೀರ್ಷಿಕೆ ಅಡಿ ರೂ. 2,80,38,894/- ಅನುದಾನ ಲಭ್ಯವಿರುತ್ತದೆ. ಉಳಿಕೆ ಮೊತ್ತರೂ. 77,33,373/-

ಗಳನ್ನು ಕೆ.ಎಸ್.ಐ.ಐ.ಡಿ.ಸಿ ನಿಯಮಿತದಲ್ಲಿ ಸದರಿ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಭರಿಸಬೇಕಾಗುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ:ಮೂಅಇ 142 ರಾಅವಿ 2020,</u>
<u>ಬೆಂಗಳೂರು, ದಿನಾಂಕ:22/3/2022.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ MoU ರಲ್ಲಿನ ಕ್ಲಾಸ್ 4.2.2(e) ರನ್ವಯ ಪ್ರಾದೇಶಿಕ ಸಂಪರ್ಕ ಯೋಜನೆ (RCS-UDAN)ರಡಿ ಏರ್‌ಲೈನ್ ಆಪರೇಟರ್ಸ್‌ಗಳು ರಾಜ್ಯದ RCS network/ಮಾರ್ಗಗಳಲ್ಲಿನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪಾಲಿನ ವಿ.ಜಿ.ಎಫ್ ಕ್ಲೇಮ್ ಸಂಖ್ಯೆ:53ರಲ್ಲಿನ ರಾಜ್ಯ ಸರ್ಕಾರದ ಪಾಲಿನ ವಿಜಿಎಫ್ ಮೊತ್ತ ರೂ. 3,57,72,267-00ಗಳಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಲೆಕ್ಕ ಶಿರ್ಷಿಕೆ "3451-00-090-1-18-059 Regional Air Conectivity other expenses (ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು)" ಅಡಿ ಲಭ್ಯವಿರುವ ರೂ. 2,80,38,894-00 (ಎರಡು ಕೋಟಿ ಎಂಬತ್ತು ಲಕ್ಷದ ಮೂವತ್ತೆಂಟು ಸಾವಿರದ ಎಂಟುನೂರ ತೊಂಬತ್ತನಾಲ್ಕು ರೂಪಾಯಿಗಳು ಮಾತ್ರ)ಗಳನ್ನು ಹಾಗೂ ಉಳಿಕೆ ಮೊತ್ತ ರೂ. 77,33,373-00 (ಎಪ್ಪತ್ತೇಳು ಲಕ್ಷದ ಮೂವತ್ಮೂರು ಸಾವಿರದ ಮುನ್ನೂರ ಎಪ್ಪತ್ತಮೂರು ರೂಪಾಯಿಗಳು ಮಾತ್ರ)ಗಳನ್ನು ಕೆ.ಎಸ್.ಐ.ಐ.ಡಿ.ಸಿ ನಿಯಮಿತದಲ್ಲಿ ಸದರಿ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಭರಿಸಲು, ಒಟ್ಟಾರೆ ರೂ. 3,57,72,267-00ಗಳನ್ನು ಕೆಎಸ್ಐಐಡಿಸಿ ನಿಯಮಿತದ ಮುಖಾಂತರ ಭಾರತ ಸರ್ಕಾರದ ಅಧೀನದಲ್ಲಿ ಬರುವ Regional Air Connectivity Fund Trust, ನವದೆಹಲಿ ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಮರುಪಾವತಿಸಲು ಮಂಜೂರಾತಿ ನೀಡಿದೆ.

ಅ) ಸರ್ಕಾರದ ಅಧಿಸೂಚನೆ ದಿನಾಂಕ 28/04/2017ರನ್ವಯ ಹಾಗೂ ಉಡಾನ್ ಯೋಜನೆಯಡಿಯಲ್ಲಿನ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಇವರು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ದಿನಾಂಕ 20/04/2017ರ ಒಪ್ಪಂದದ ಅನುಸಾರ ಕ್ರಮವಹಿಸುವುದು ಹಾಗೂ ಬಿಡುಗಡೆಗೂ ಮುನ್ನ ಪರಿಶೀಲಿಸಿ, ನಂತರ ಬಿಡುಗಡೆ ಮಾಡತಕ್ಕದ್ದು.

ಆ) ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸಲ್ಲಿಸತಕ್ಕದ್ದು ಹಾಗೂ ವಿಜಿಎಫ್ ಮೊತ್ತದ ಬಗ್ಗೆ ದಾಖಲಾತಿಗಳನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

2. ಈ ವೆಚ್ಚವನ್ನು 2021-22 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಲೆಕ್ಕಶಿರ್ಷಿಕೆ "3451-00-090-1-18-059- ಪ್ರಾದೇಶಿಕ ವಾಯು ಸಂಪರ್ಕ –ಇತರೆ ಖರ್ಚುಗಳು" ರಡಿ ಲಭ್ಯವಿರುವ ರೂ. 2,80,38,894-00 (ಎರಡು ಕೋಟಿ ಎಂಬತ್ತು ಲಕ್ಷದ ಮೂವತ್ತೆಂಟು ಸಾವಿರದ ಎಂಟುನೂರ ತೊಂಬತ್ತನಾಲ್ಕು ರೂಪಾಯಿಗಳು ಮಾತ್ರ)ಗಳನ್ನು ಹಾಗೂ ಉಳಿಕೆ ಮೊತ್ತ ರೂ. 77,33,373-00 (ಎಪ್ಪತ್ತೇಳು ಲಕ್ಷದ ಮೂವತ್ಮೂರು ಸಾವಿರದ ಮುನ್ನೂರ ಎಪ್ಪತ್ತಮೂರು ರೂಪಾಯಿಗಳು ಮಾತ್ರ)ಗಳನ್ನು ಕೆ.ಎಸ್.ಐ.ಐ.ಡಿ.ಸಿ ನಿಯಮಿತದಲ್ಲಿ ಸದರಿ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದ್ದು.

3. ರೂ. 2,80,38,894-00 (ಎರಡು ಕೋಟಿ ಎಂಬತ್ತು ಲಕ್ಷದ ಮೂವತ್ತೆಂಟು ಸಾವಿರದ ಎಂಟುನೂರ ತೊಂಬತ್ತನಾಲ್ಕು ರೂಪಾಯಿಗಳು ಮಾತ್ರ) ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ. ನಿಯಮಿತ ಬೆಂಗಳೂರು ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ಸೆಳೆಯಲು ಅನುಮತಿಸಿದೆ.

4. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ 31/12/2021 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ,

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-1,2,3A & E), ಪ್ರಧಾನ ಮಹಾಲೇಖಪಾಲರ ಕಛೇರಿ, ಎಎಡಿ ಸೆಕ್ಷನ್, ಕೆ.ಪಿ.ಎಸ್.ಸಿ.ಕಛೇರಿ ಎದುರು, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ಆಯುಕ್ತರು/ನಿರ್ದೇಶಕರು, ಖಜಾನೆ ಇಲಾಖೆ, ಕೆ.ಪಿ ಸಿಎಲ್ ಕಟ್ಟಡ, ಬೆಂಗಳೂರು.
4. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು
5. ಅಪರ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಕಾರ್ಯಕ್ರಮ, ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1,) ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ, ವೆಬ್ ಸೈಟ್ ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.